**ಹೇಮಾವತಿ ಎಡದಂಡೆ ನಾಲೆ.**

380-ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹೇಮಾವತಿ ಎಡದಂತೆ ನಾಲೆಯ ಕೆಲಸದ ಈಗಿನ ಹಂತ ;*

*ಆ) ನಾಲೆಯ ಕೆಲಸಗಳಿಗೆ ಅನುದಾನ ಬಿಡುಗಡೆಯಾಗಿರುವ ವಿವರಗಳು ಹಾಗೂ ಈವರೆಗೆ ಖರ್ಚು ಮಾಡಿರುವ ಮೊತ್ತ;*

*ಇ) ಉಡ್ಡ ಮೋರಿಗಳ ಕೆಲಸಗಳನ್ನು (ಸಿ.ಡಿ.ವರ್ಕ್ಸ್) ಹಾಗೂ ವಿತರಣಾ ನಾಲೆಗಳ ಕೆಲಸಗಳನ್ನು ಒಟ್ಟಿಗೆ ತೆಗೆದುಕೊಳ್ಳಲಾಗಿದೆಯೇ?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಕೆಲವು ಉಡ್ಡ ಮೋರಿಗಳ (ಸಿ.ಡಿ.) ಕೆಲಸಗಳು ಹಾಗೂ ನಾಲೆಯ ಲೈನಿಂಗ್ ಕೆಲಸಗಳ ಹೊರತಾಗಿ ನಾಲೆಯ ಕೆಲಸವು ಮುಗಿದಿರುತ್ತದೆ. ಡಿಸ್ಟ್ರಿಬ್ಯೂಟರಿ ಸಂಖ್ಯೆ 70 ರಿಂದ 72ರ ಕಾಮಗಾರಿಗಳು ವಿವಿಧ ಹಂತದಲ್ಲಿವೆ. ಬಾಗೂರು ನವಿಲೆ ಸುರಂಗದ ನಂತರದ "ವೈ" ಅಲೈನ್‌ಮೆಂಟಿನ ಸೀಳು ಆಳ ನಾಲೆ (ಡೀಪ್‌ಕಟ್ ಕೆನಾಲ್) ಕೆಲಸವು ನಡೆಯುತ್ತಿದ್ದು, ಡಿಸೆಂಬರ್ 93ರೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ) ತುಮಕೂರು ಬ್ರಾಂಚ್ ಕೆನಾಲ್ 131ನೇ ಕಿ.ಮೀ. ವರೆಗಿನ ಬೇರೆ ಬೇರೆ ರೀಚ್‌ಗಳ ಕೆಲಸಗಳು ಪ್ರಗತಿಯಲ್ಲಿವೆ. 132 ರಿಂದ 151 ಕಿ.ಮೀ. ವರೆಗಿನ ರೀಚ್‌ನ ಸಮೀಕ್ಷೆ ಕೆಲಸವು ಪ್ರಗತಿಯಲ್ಲಿದೆ. ನಾಗಮಂಗಲ ಬ್ರಾಂಚ್ ಕೆನಾಲ್‌ನ 67ನೇ ಕಿ.ಮೀ. ವರೆಗಿನ ಕೆಲಸವು ಪ್ರಗತಿಯಲ್ಲದೆ. ಮತ್ತು 67ನೇ ಕಿ.ಮೀ. ನಂತರದ ಸಮೀಕ್ಷೆ ಕೆಲಸಗಳು ಪ್ರಗತಿಯಲ್ಲಿದೆ.

ಇ) ಹೇಮಾವತಿ ಯೋಜನೆಗೆ 1992-93ರ ಸಾಲಿಗೆ ರೂ. 90.00 ಕೋಟಿ ಅನುದಾನ ಒದಗಿಸಲಾಗಿದೆ. ನವೆಂಬರ್ 92ರವರೆಗೆ ರೂ. 45. 86 ಕೋಟಿಗಳನ್ನು ಖರ್ಚು ಮಾಡಲಾಗಿದೆ.

ಹೌದು.

**ಬಾಗೂರು ನವಲೆ ಸುರಂಗದ ಕೆಲಸಗಳು.**

380 ಎ-ಶ್ರೀ ಎಸ್. ಶಫಿ ಅಹಮದ್ (ತುಮಕೂರು): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬಾಗೂರು ನವಿಲೆ ಸುರಂಗದ ಕೆಲಸಗಳು ಯಾವಾಗ ಪೂರ್ಣಗೊಳ್ಳುವುದು? ಮತ್ತು ಪ್ರಸ್ತುತ ಪ್ರಗತಿಯ ಬಗ್ಗೆ ಮಾಹಿತಿ.*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಬಾಗೂರು ನವಿಲೆ ಸುರಂಗದ ಕೆಲಸ ಪೂರ್ಣಗೊಂಡಿದೆ.

**ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕರಡಿಲಕ್ಕನಕೆರೆಯ ಏತ ನೀರಾವರಿ ಯೋಜನೆ.**

453 - ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪಿರಿಯಾ ಪಟ್ಟಣ ತಾಲ್ಲೂಕಿನ ಹಾರಂಗಿ ಯೋಜನೆಯ ಆಡಿಯಲ್ಲಿ ಬರುವ ಕರಡಿಲಕ್ಕನಕೆರೆಯ ಏತ ನೀರಾವರಿ ಕಾಲುವೆ ಕೆಲಸ ಈವರೆಗೆ ಎಷ್ಟು ಕಿ.ಮೀ. ಆಗಿರುತ್ತದೆ?*